ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ

ಸಂಖ್ಯೆ:ಕವಿಹಂ:ಕುಸ:02:ದೂಶಿನಿ:17:ಗೋಚಾ:ಮಾಸೂ:2022–23 ದಿನಾಂಕ:15.09.2022

# ಸುವರ್ಣಾವಕಾಶ (GOLDEN CHANCE) ಮಾರ್ಗಸೂಚಿ

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೂರಶಿಕ್ಷಣ ನಿರ್ದೇಶನಾಲಯವು ನಡೆಸುತ್ತಿರುವ ಸ್ನಾತಕೋತ್ತರ ಮತ್ತು ಡಿಪ್ಲೊಮಾ ಕೋರ್ಸ್‌ಗಳಿಗೆ 2009–2010 ರಿಂದ 2016–2017ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಮರು ಪರೀಕ್ಷೆ(Re Exam) ಮತ್ತು ಅಂಕಗಳ ಉತ್ತಮೀಕರಣ(Improvement) ಮಾಡಿಕೊಳ್ಳಲು ಸುವರ್ಣಾವಕಾಶ(GOLDEN CHANCE)ವನ್ನು ನೀಡಲು, ದಿನಾಂಕ:17.08.2022ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ 21ನೇ ಉನ್ನತ ಸಲಹಾ ಸಮಿತಿ ಸಭೆ, ದಿನಾಂಕ:07.09.2022ರಂದು ನಡೆದ 214ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಸುವರ್ಣಾವಕಾಶ (GOLDEN CHANCE) ಪ್ರಕ್ರಿಯೆಗೆ ಮಾನ್ಯ ಕುಲಪತಿಗಳು ದಿನಾಂಕ:15.09.2022ರಂದು ಆಡಳಿತಾತ್ಮಕ ಅನುಮೋದನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ಸಮಿತಿಗಳು ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯಂತೆ, ಸುವರ್ಣಾವಕಾಶ(GOLDEN CHANCE) ಪಡೆಯುವ ವಿದ್ಯಾರ್ಥಿಗಳಿಗೆ ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗಿದ್ದು, ಸುವರ್ಣಾವಕಾಶ(GOLDEN CHANCE) ಪಡೆಯುವ ವಿದ್ಯಾರ್ಥಿಗಳು, ದೂರಶಿಕ್ಷಣ ನಿರ್ದೇಶನಾಲಯ, ದೂರಶಿಕ್ಷಣ ನಿರ್ದೇಶನಾಲಯದಿಂದ ಮಾನ್ಯತೆ ಪಡೆದಿರುವ ಅಧ್ಯಯನ ಕೇಂದ್ರಗಳು, ವಿಸ್ತರಣಾ ಕೇಂದ್ರಗಳು, ಸಮನ್ವಯ ಘಟಕಗಳ ಮುಖ್ಯಸ್ಥರು ಈ ಕೆಳಗಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಲು ಸೂಚಿಸಲಾಗಿದೆ.

1. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೂರಶಿಕ್ಷಣ ನಿರ್ದೇಶನಾಲಯದಲ್ಲಿ 2009–2010 ರಿಂದ 2016–2017ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಮತ್ತು ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆದು ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಮರು ಪರೀಕ್ಷೆ(Re Exam) ಮತ್ತು ಅಂಕಗಳ ಉತ್ತಮೀಕರಣ(Improvement) ಮಾಡಿಕೊಳ್ಳಲು ಬಯಸುವ ವಿದ್ಯಾರ್ಥಿಗಳು ಮಾತ್ರ ಸುವರ್ಣಾವಕಾಶ(GOLDEN CHANCE)ವನ್ನು ಪಡೆದುಕೊಳ್ಳಬಹುದು.
2. ಈ ಸುವರ್ಣಾವಕಾಶ(GOLDEN CHANCE)ವು ದೂರಶಿಕ್ಷಣ ನಿರ್ದೇಶನಾಲಯವು 2022–2023ನೇ ಸಾಲಿನಲ್ಲಿ ನಡೆಸುವ 2020–2021ನೇ ಸಾಲಿನ ಪರೀಕ್ಷೆ(Exam)ಗಳು ಮತ್ತು ಸಂಪರ್ಕ ತರಗತಿ(Contact Programes)ಗೆ ಮಾತ್ರ ಅನ್ವಯವಾಗುತ್ತದೆ.
3. ಸುವರ್ಣಾವಕಾಶ(GOLDEN CHANCE)ದ ಅಡಿಯಲ್ಲಿ ಮರು ಪರೀಕ್ಷೆ(Re Exam) ಮತ್ತು ಅಂಕಗಳ ಉತ್ತಮೀಕರಣ(Improvement) ಮಾಡಿಕೊಳ್ಳಲು ಬಯಸುವ ಅಥವಾ ಸಂಪರ್ಕ ತರಗತಿ(Contact Programes)ಗಳಿಗೆ ಹಾಜರಾಗಲು ಬಯಸುವ ವಿದ್ಯಾರ್ಥಿಗಳು ದೂರಶಿಕ್ಷಣ ನಿರ್ದೇಶನಾಲಯ ನಿಗದಿಪಡಿಸಿರುವ ಶುಲ್ಕದ ಜೊತೆಗೆ ಸುವರ್ಣಾವಕಾಶ(GOLDEN CHANCE)ಕ್ಕಾಗಿ ನಿಗದಿಪಡಿಸಿರುವ ಶುಲ್ಕಗಳನ್ನು ಭರಿಸಬೇಕು.
4. ಮರು ಪರೀಕ್ಷೆ(Re Exam), ಅಂಕಗಳ ಉತ್ತಮೀಕರಣ(Improvement) ಹಾಗೂ ಸಂಪರ್ಕ ತರಗತಿ(Contact Programes)ಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಪವಾವತಿಸಬೇಕಾದ ಶುಲ್ಕ ವಿವರಗಳು;

| ಮರು ಪರೀಕ್ಷೆ(Re Exam) ಪಡೆಯುವ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ ವಿವರಗಳು | | | | | |
|---|---|---|---|---|---|
| **ಶುಲ್ಕ ವಿವರಗಳು** | **1 ಪತ್ರಿಕೆ** | **2 ಪತ್ರಿಕೆ** | **3 ಪತ್ರಿಕೆ** | **4 ಪತ್ರಿಕೆ** | **5 ಪತ್ರಿಕೆ** |
| ವಿಶ್ವವಿದ್ಯಾಲಯ ನಿಗದಿಪಡಿಸಿರುವ ಶುಲ್ಕ | 200 | 400 | 600 | 800 | 1000 |
| ಸುವರ್ಣಾವಕಾಶ(GOLDEN CHANCE) ಶುಲ್ಕ | 300 | 600 | 900 | 1200 | 1500 |
| **ಒಟ್ಟು** | **500** | **1000** | **1500** | **2000** | **2500** |

| ಅಂಕಗಳ ಉತ್ತಮೀಕರಣ(Improvement) ಪಡೆಯುವ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ ವಿವರಗಳು | |
|---|---|
| **ಶುಲ್ಕ ವಿವರಗಳು** | **5 ಪತ್ರಿಕೆಗಳು** |
| ವಿಶ್ವವಿದ್ಯಾಲಯ ನಿಗದಿಪಡಿಸಿರುವ ಶುಲ್ಕ | 1000 |
| ಸುವರ್ಣಾವಕಾಶ(GOLDEN CHANCE) ಶುಲ್ಕ | 1500 |
| **ಒಟ್ಟು** | **2500** |

| ಸಂಪರ್ಕ ತರಗತಿ(Contact Programes)ಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ ವಿವರಗಳು | |
|---|---|
| **ಶುಲ್ಕ ವಿವರಗಳು** | **5 ಪತ್ರಿಕೆಗಳು** |
| ವಿಶ್ವವಿದ್ಯಾಲಯ ನಿಗದಿಪಡಿಸಿರುವ ಶುಲ್ಕ | 2500 |
| **ಡಿಪ್ಲೊಮಾ ಕೋರ್ಸ್‌ಗಳ ವಿದ್ಯಾರ್ಥಿಗಳು** | **2000** |

5. **ಮರು ಪರೀಕ್ಷೆ(RE EXAM)** ಬಯಸುವ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ(GOLDEN CHANCE)ನಲ್ಲಿ ಮರು ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳು ಅಧ್ಯಯನ ಮಾಡಿದ ಕೋರ್ಸ್‌ಗಳಿಗೆ ಸಂಬಂಧಿಸಿದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಮರುಪರೀಕ್ಷೆ ತೆಗೆದುಕೊಳ್ಳಬಹುದು. ಆಯ್ಕೆ ಮಾಡಿಕೊಂಡ ವಿಷಯಗಳಿಗೆ ಕ್ರ.ಸಂ.04ರಲ್ಲಿ ವಿವರಿಸಿರುವಂತೆ ದೂರಶಿಕ್ಷಣ ನಿರ್ದೇಶನಾಲಯ **ಒಂದು ಪತ್ರಿಕೆ**ಗೆ ನಿಗದಿಪಡಿಸಿರುವ ಶುಲ್ಕ ರೂ.200/– ಮತ್ತು ಸುವರ್ಣಾವಕಾಶ(GOLDEN CHANCE)ಕ್ಕಾಗಿ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಶುಲ್ಕ ರೂ.300/– ಒಟ್ಟು ಒಂದು ಪತ್ರಿಕೆಗೆ ರೂ.500/–ಗಳಂತೆ ಶುಲ್ಕ ಪಾವತಿಸಬೇಕು.

6. **ಅಂಕಗಳ ಉತ್ತಮೀಕರಣ(IMPROVEMENT)** ಬಯಸುವ ವಿದ್ಯಾರ್ಥಿಗಳಿಗೆ ಸುವರ್ಣವಕಾಶ(GOLDEN CHANCE)ನಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅಂತಹ ವಿದ್ಯಾರ್ಥಿಗಳು ಎಲ್ಲಾ ಲಿಖಿತ ಪತ್ರಿಕೆಗಳಿಗೆ ಪರೀಕ್ಷೆ ತೆಗೆದುಕೊಳ್ಳಬೇಕು. ಎಲ್ಲಾ ಲಿಖಿತ ಪತ್ರಿಕೆಗಳನ್ನು ಆಯ್ಕೆ ಮಾಡಿಕೊಳ್ಳದ ಅಥವಾ ಭಾಗಶಃ ಲಿಖಿತ ಪರೀಕ್ಷಾ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳು ಮರು ಪರೀಕ್ಷೆಯ ವ್ಯಾಪ್ತಿಗೆ ಒಳಪಡುತ್ತಾರೆ. ಎಲ್ಲಾ ಲಿಖಿತ ಪತ್ರಿಕೆಗಳ ಪರೀಕ್ಷೆಗಳನ್ನು ತೆಗೆದುಕೊಂಡು ಅಂಕಗಳ ಉತ್ತಮೀಕರಣಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ನಿಗದಿಪಡಿಸಿರುವ ಶುಲ್ಕ ರೂ.1000/- ಮತ್ತು ಸುವರ್ಣವಕಾಶ(GOLDEN CHANCE) ಕ್ಕಾಗಿ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಶುಲ್ಕ ರೂ.1500/- ಒಟ್ಟು ಒಂದು ಪತ್ರಿಕೆಗೆ ರೂ.2500/-ಗಳನ್ನು ಪಾವತಿಸಬೇಕು.

7. **ಸಂಪರ್ಕ ತರಗತಿ(CONTACT PROGRAMES)**ಗಳಿಗೆ ಹಾಜರಾಗದೇ ಅನುತ್ತೀರ್ಣ ಆಗಿರುವ ವಿದ್ಯಾರ್ಥಿಗಳು ಸಂಪರ್ಕ ತರಗತಿಗಳಿಗೆ ಹಾಜರಾಗಲು ಅವಕಾಶ ಕಲ್ಪಿಸಲಾಗಿದ್ದು, ಈ ಸೌಲಭ್ಯವನ್ನು ಪಡೆಯುವ ವಿದ್ಯಾರ್ಥಿಗಳು ಸಂಪರ್ಕ ತರಗತಿಗಳಿಗೆ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪೂರ್ಣ ಶುಲ್ಕ ಎಂ.ಎ. ಕೋರ್ಸ್‌ಗಳ ವಿದ್ಯಾರ್ಥಿಗಳು ರೂ.2500/- ಹಾಗೂ ಡಿಪ್ಲೊಮಾ ಕೋರ್ಸ್‌ಗಳ ವಿದ್ಯಾರ್ಥಿಗಳು ರೂ.2000/-ಗಳನ್ನು ಪಾವತಿಸಿ ಸಂಪರ್ಕ ತರಗತಿಗೆ ಹಾಜರಾಗಬಹುದು.

8. ಶುಲ್ಕಗಳನ್ನು ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಹೆಸರಿಗೆ ಡಿ.ಡಿ.ಯನ್ನು ಹೊಸಪೇಟೆಯ ಕಮಲಾಪುರದಲ್ಲಿ ಪಾವತಿಯಾಗುವಂತೆ ಡಿ.ಡಿ.ಯನ್ನು ತೆಗೆದು ಅರ್ಜಿಯೊಂದಿಗೆ ಸಲ್ಲಿಸಬಹುದು ಅಥವಾ ಕಚೇರಿ ಸಮಯದಲ್ಲಿ ಹಣಕಾಸು ವಿಭಾಗದಲ್ಲಿ ನಗದು ಪಾವತಿಸಿ ರಸೀದಿ ಪಡೆದು ಅರ್ಜಿಯೊಂದಿಗೆ ಸಲ್ಲಿಸಬಹುದು.

9. ಸುವರ್ಣವಕಾಶ(GOLDEN CHANCE)ದಲ್ಲಿ ಮರು ಪರೀಕ್ಷೆ(Re Exam), ಅಂಕಗಳ ಉತ್ತಮೀಕರಣ(Improvement)ಕ್ಕಾಗಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಮತ್ತು ಸಂಪರ್ಕ ತರಗತಿ(Contact Programes)ಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಹಿಂದಿನ ಅಂಕಗಳನ್ನೇ ಉಳಿಸಿಕೊಳ್ಳಲು ಅಥವಾ ಸುವರ್ಣವಕಾಶ(GOLDEN CHANCE)ದಲ್ಲಿ ಪಡೆದ ಅಂಕಗಳನ್ನು ಉಳಿಸಿಕೊಳ್ಳಲು ಅವಕಾಶವಿರುತ್ತದೆ.

10. ಈ ಸುವರ್ಣವಕಾಶ(GOLDEN CHANCE)ವು 2009-2010ನೇ ಸಾಲಿನಿಂದ 2016-17ನೇ ಸಾಲಿನಲ್ಲಿ ದೂರಶಿಕ್ಷಣ ನಿರ್ದೇಶನಾಲಯದ ಎಂ.ಎ. ಮತ್ತು ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ ಮತ್ತು ಈ ಅವಕಾಶವನ್ನು ವಿಸ್ತರಿಸಲಾಗುವುದಿಲ್ಲ. ಹಾಗೂ ಈ ಸುವರ್ಣವಕಾಶ(GOLDEN CHANCE)ದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುನಃ ಪರೀಕ್ಷೆ ಬರೆಯುಲು ಅವಕಾಶವಿರುವುದಿಲ್ಲ.

11. **ಸಂಪರ್ಕ ತರಗತಿಗಳು;**
   - ದಿನಾಂಕ:10.10.2022 ರಿಂದ ದಿನಾಂಕ:19.10.2022ರವರೆಗೆ ಪ್ರಥಮ ವರ್ಷದ ಎಂ.ಎ. ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಮತ್ತು ಎಂ.ಜೆ.ಎಂ.ಸಿ. ಹಾಗೂ ಆಡಳಿತ ಕನ್ನಡ, ಕನ್ನಡ ಸಾಹಿತ್ಯ, ಭಾಷಾಂತರ ಅಧ್ಯಯನ, ಪತ್ರಿಕೋದ್ಯಮ ಅಧ್ಯಯನ, ನಾಟಕಕಲೆ, ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಶಾಸನಶಾಸ್ತ್ರ ಡಿಪ್ಲೊಮಾ ಕೋರ್ಸ್‌ಗಳಿಗೆ ಸಂಪರ್ಕ ತರಗತಿಗಳು ಆಯೋಜಿಸಲಾಗಿದೆ.
   - ದಿನಾಂಕ:12.10.2022 ರಿಂದ ದಿನಾಂಕ:21.10.2022ರವರೆಗೆ ಅಂತಿಮ ವರ್ಷದ ಎಂ.ಎ. ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.) ಕೋರ್ಸ್‌ಗಳಿಗೆ ಸಂಪರ್ಕ ತರಗತಿಗಳು ಆಯೋಜಿಸಲಾಗಿದೆ.

12. **ಗೃಹಲೇಖನ / ಸಂಪ್ರಬಬಂಧ ಸಲ್ಲಿಕೆ;**
   - ಪ್ರಥಮ ಮತ್ತು ಅಂತಿಮ ವರ್ಷಗಳ ಎಂ.ಎ. ಕನ್ನಡ, ಚರಿತ್ರೆ ಮತ್ತು ಸಮಾಜಶಾಸ್ತ್ರ ಹಾಗೂ ಆಡಳಿತ ಕನ್ನಡ, ಕನ್ನಡ ಸಾಹಿತ್ಯ ಅಧ್ಯಯನ, ಭಾಷಾಂತರ ಅಧ್ಯಯನ ಡಿಪ್ಲೊಮಾ ಕೋರ್ಸ್‌ಗಳಿಗೆ ಗೃಹಲೇಖನ / ಸಂಪ್ರಬಂಧ ಸಲ್ಲಿಸಬಹುದು.
   - ಪ್ರಥಮ ಮತ್ತು ಅಂತಿಮ ವರ್ಷಗಳ ಎಂ.ಎ. ಪತ್ರಿಕೋದ್ಯಮ ಅಧ್ಯಯನ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.) ಹಾಗೂ ಪತ್ರಿಕೋದ್ಯಮ ಅಧ್ಯಯನ, ನಾಟಕಕಲೆ, ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಶಾಸನಶಾಸ್ತ್ರ ಡಿಪ್ಲೊಮ ಕೋರ್ಸ್‌ಗಳ 5ನೇ ಪತ್ರಿಕೆಗಳು ಪೂರ್ಣ ಪ್ರಾಯೋಗಿಕವಾಗಿರುವುದರಿಂದ ಸಂಪರ್ಕ ತರಗತಿಗಳಿಗೆ ಹಾಜರಾಗಲು ಅವಕಾಶ ಕಲ್ಪಿಸಲಾಗಿದೆ. 5ನೇ ಪತ್ರಿಕೆಗಳಿಗೆ ಗೃಹಲೇಖನ ಅಥವಾ ಸಂಪ್ರಬಂಧ ಸಲ್ಲಿಸಲು ಅವಕಾಶವಿರುವುದಿಲ್ಲ.
   - ಎಂ.ಎ. ಮತ್ತು ಡಿಪ್ಲೊಮಾ ಕೋರ್ಸ್‌ಗಳ ಪತ್ರಿಕೆ 01 ರಿಂದ 04ವರೆಗೆ ಗೃಹಲೇಖನ / ಸಂಪ್ರಬಂಧ ಸಲ್ಲಿಸಬಹುದು.

13. ಉಳಿದಂತೆ ಕೋರ್ಸ್‌ಗಳಿಗೆ ಸಂಬಂಧಿಸಿದ ಎಲ್ಲಾ ನಿಯಮಾವಳಿಗಳು ಯಥಾವತ್ತಾಗಿ ಅನ್ವಯವಾಗುತ್ತವೆ.

14. ಸಂಪರ್ಕ ತರಗತಿ, ಶೈಕ್ಷಣಿಕ ವೇಳಾಪಟ್ಟಿ, ಮಾರ್ಗಸೂಚಿ, ಸೂಚನೆಗಳು, ನಮೂನೆಗಳು ಮತ್ತು ಇತರೆ ಮಾಹಿತಿಗಳನ್ನು ಕನ್ನಡ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.kannadauniversity.org.ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರಶಿಕ್ಷಣ ನಿರ್ದೇಶನಾಲಯದ ಮೊಬೈಲ್ ಸಂಖ್ಯೆ 8792219968ಗೆ ಸಂಪರ್ಕಿಸಬಹುದು.

16/9/22

ನಿರ್ದೇಶಕರು | ಕುಲಸಚಿವರು | ಕುಲಪತಿಗಳು